ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ,

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ರಾಯಚೂರು-584101 .

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)

ಇ ಮೇಲ್ ವಿಳಾಸ: dpdoraichur@gmail.com **ದೂರವಾಣಿ:** 08532-225010

ಸಂಖ್ಯೆ : ಜಿ.ಆ&ಕು.ಕ.ಅ/ಎನ್.ಹೆಚ್.ಎಂ.& ಪಿ.ಎಂ.ಅಭೀಮ್/ ಗು-ಸಿಬ್ಬಂದಿ/ /2025-26 ದಿನಾಂಕ: 23.02.2026.

### <u>ನೇಮಕಾತಿ ಪ್ರಕಟಣೆ</u>

ರಾಯಚೂರು ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆದಡಿ ಈ ಕೆಳಗೆ ತೋರಿಸಿದ ಗುತ್ತಿಗೆ ಆಧಾರದ ಮೇಲೆ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ಮತ್ತು ಪಿ.ಎಂ ಅಭೀಮ್ ಯೋಜನೆಯಡಿಯಲ್ಲಿ 2025-26 ನೇ ಸಾಲಿಗೆ ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಮತ್ತು ಆರೋಗ್ಯ ನಿರೀಕ್ಷಣಾಧಿಕಾಧಿಕಾರಿಗಳು ಹುದ್ದೆಗಳನ್ನು ತಾತ್ಕಾಲಿಕವಾಗಿ ರೋಷ್ಟರ್ ಕಂ ಮೆರಿಟ್. ಮೂಲಕ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ **25.02.206** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **11.03.2026** ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್: https://raichur.nic.in ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಷರತ್ತು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ವಿದ್ಯಾರ್ಹತೆ | ಮಾಸಿಕ ವೇತನ | ಮೀಸಲಾತಿ | ವಯೋಮಿತಿ |
|---|---|---|---|---|---|
| 01 | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು – 18 ಹುದ್ದೆಗಳು. ಪಿ.ಎಂ.ಅಭೀಮ್ ನಮ್ಮ ಕ್ಲಿನಿಕ್-18 (ನಮ್ಮ ಕ್ಲಿನಿಕ್ ಮಾನ್ವಿ-03, ಸಿರವಾರ-01, ದೇವದುರ್ಗ-02, ರಾಯಚೂರು-03, ಲಿಂಗಸೂಗೂರು-02, ಮಸ್ಕಿ-01, ಹಟ್ಟಿ-01, ಸಿಂಧನೂರು-02, ಕವಿತಾಳ-01, ಮುದಗಲ್ಲ-01, ತುರ್ವಿಹಾಳ-01,) | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ತರಬೇತಿಯನ್ನು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಮತ್ತು ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯಾಗಿರಬೇಕು. | ರೂ. 15,397/- ರಿಂದ ರೂ. 14,044/- (ವಲಯಗಳನ್ವಯ) | ರೋಷ್ಟರ್ ಕಂ ಮೇರಿಟ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು – ಅನುಬಂಧ – 1 ರಲ್ಲಿ ವಿವರಿಸಿದೆ ಕೆ.ಕೆ.ಆರ್.-14 ಹುದ್ದೆಗಳು ಹಾಗೂ ನಾನ್ ಕೆ.ಕೆ.ಆರ್. 4 ಹುದ್ದೆಗಳು ಒಟ್ಟು 18 ಹುದ್ದೆಗಳು. | ಗರಿಷ್ಠ-40 ವರ್ಷ ಮೀರಿರಬಾರದು |
| 02 | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು – 01 ಹುದ್ದೆಗಳು. | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ತರಬೇತಿಯನ್ನು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಮತ್ತು ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯಾಗಿರಬೇಕು. | ರೂ. 15,397/- ರಿಂದ ರೂ. 14,044/- (ವಲಯಗಳನ್ವಯ) | ರೋಷ್ಟರ್ ಕಂ ಮೇರಿಟ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು – ಅನುಬಂಧ – 1 ರಲ್ಲಿ ವಿವರಿಸಿದೆ. | ಗರಿಷ್ಠ-40 ವರ್ಷ ಮೀರಿರಬಾರದು |
| 03 | ಆರೋಗ್ಯ ನಿರೀಕ್ಷಣಾಧಿಕಾಧಿಕಾರಿಗಳು-01 ಹುದ್ದೆ (ನಗರ ಆರೋಗ್ಯ ಕೇಂದ್ರ ಹರಿಜನವಾಡ-01 ) | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿಧೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಹೊಂದಿರಬೇಕು. ಅಥವಾ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. ಅಥವಾ ಪಿ.ಯು.ಸಿ. (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳಿ ನಡೆಸುವ 2 ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. | ರೂ. 15397/- (ವಲಯಗಳನ್ವಯ) | ರೋಷ್ಟರ್ ಕಂ ಮೇರಿಟ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು – ಅನುಬಂಧ – 1 ರಲ್ಲಿ ವಿವರಿಸಿದೆ. | ಗರಿಷ್ಠ-40 ವರ್ಷ ಮೀರಿರಬಾರದು |

# ಅನುಬಂಧ-1

1. **ಕಿರಿಯ ಆರೋಗ್ಯ ಸಹಾಯಕರು ಮಹಿಳಾ:-ಒಟ್ಟು ಹುದ್ದೆಗಳು-14 ಕಲ್ಯಾಣ ಕರ್ನಾಟಕ ಪ್ರದೇಶ ವೃಂದ (KKR) (ಪಿ.ಎಮ್. ಅಭಿಮ್ ಯೋಜನೆ)**

| ಪ್ರವರ್ಗಗಳು | ನೇರ/ಒಳಾ ಮಿಸಲಾತಿ | ಸಮತಾಳ ಮಿಸಲಾತಿ |
|---|---|---|
| ಪರಿಶಿಷ್ಟ ಜಾತಿ (ಪ.ಜಾ)-ಎ | 01 | ಇತರೆ-1 |
| ಪರಿಶಿಷ್ಟ ಜಾತಿ (ಪ.ಜಾ)-ಬಿ | 01 | ಇತರೆ-1 |
| ಪರಿಶಿಷ್ಟ ಪಂಗಡ (ಪ.ಪಂ) | 01 | ಇತರೆ-1 |
| ಪ್ರವರ್ಗ-I | 01 | ಇತರೆ-1 |
| ಪ್ರವರ್ಗ-II (ಎ) | 02 | ಇತರೆ-1<br>ಮಹಿಳೆ-1 |
| ಪ್ರವರ್ಗ-II (ಬಿ) | 01 | ಇತರೆ-1 |
| ಸಮಾನ್ಯ ಅಭ್ಯರ್ಥಿ | 07 | ಇತರೆ-2, ಮಹಿಳೆ ಅಭ್ಯರ್ಥಿ -2<br>ಅಂಗವಿಕಲ ಅಭ್ಯರ್ಥಿ -1<br>ಗ್ರಾಮೀಣ ಅಭ್ಯರ್ಥಿ-2 |
| ಒಟ್ಟು | 14 | |

**ಕಿರಿಯ ಆರೋಗ್ಯ ಸಹಾಯಕರು ಮಹಿಳಾ:-ಒಟ್ಟು ಹುದ್ದೆಗಳು-04 ನಾನ್- ಕಲ್ಯಾಣ ಕರ್ನಾಟಕ ಪ್ರದೇಶ ವೃಂದ (N0N-KKR) (ಪಿ.ಎಮ್. ಅಭಿಮ್ ಯೋಜನೆ)**

| ಪ್ರವರ್ಗಗಳು | ನೇರ/ಒಳಾ ಮಿಸಲಾತಿ | ಸಮತಾಳ ಮಿಸಲಾತಿ |
|---|---|---|
| ಪರಿಶಿಷ್ಟ ಜಾತಿ (ಪ.ಜಾ)-ಎ | 01 | ಇತರೆ-1 |
| ಪರಿಶಿಷ್ಟ ಪಂಗಡ (ಪ.ಪಂ) | 01 | ಇತರೆ-1 |
| ಸಮಾನ್ಯ ಅಭ್ಯರ್ಥಿ | 02 | ಇತರೆ-1 , ಮಹಿಳೆ ಅಭ್ಯರ್ಥಿ -1 |
| ಒಟ್ಟು | 04 | |

2. **ಕಿರಿಯ ಆರೋಗ್ಯ ಸಹಾಯಕರು ಪುರುಷ:-ಒಟ್ಟು ಹುದ್ದೆಗಳು -01 (ಎನ್.ಯು.ಹೆಚ್.ಎಂ)**

| ಪ್ರವರ್ಗಗಳು | ನೇರ/ಒಳಾ ಮಿಸಲಾತಿ | ಸಮತಾಳ ಮಿಸಲಾತಿ |
|---|---|---|
| ಪರಿಶಿಷ್ಟ ಜಾತಿ (ಪ.ಜಾ)-ಎ | 01 | ಇತರೆ-1 |

3. **ಕಿರಿಯ ಆರೋಗ್ಯ ಸಹಾಯಕರು ಮಹಿಳೆ :-ಒಟ್ಟು ಹುದ್ದೆಗಳು -01 (ಎನ್.ಯು.ಹೆಚ್.ಎಂ)**

| ಪ್ರವರ್ಗಗಳು | ನೇರ/ಒಳಾ ಮಿಸಲಾತಿ | ಸಮತಾಳ ಮಿಸಲಾತಿ |
|---|---|---|
| ಪರಿಶಿಷ್ಟ ಜಾತಿ (ಪ.ಜಾ)-ಎ | 01 | ಇತರೆ-1 |

**ನೇಮಕಾತಿ ನಿಯಮ ಮತ್ತು ಷರತ್ತು :-**

1. ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ.
2. ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : 25-02-2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 11-03-2026.
3. ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮಗಳನ್ವಯ ವಯೋಮಿತಿಯ ನ್ನು ಪರಿಗಣಿಸಲಾಗುವುದು.
5. ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಢಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು.
6. ಒಬ್ಬರೇ ಅಭ್ಯರ್ಥಿಯು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರುರವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
8. ಹುದ್ದೆಗಳ ಸಂಖ್ಯೆ ಹಾಗೂ ನೇಮಕಾತಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಡಿ ಕಾಯ್ದಿರಿಸಲಾಗಿರುತ್ತದೆ.
9. ಸದರಿ ನೇಮಕಾತಿ ಪ್ರಕಟಣೆಯ ವಿವರಗಳನ್ನು ರಾಯಚೂರು ಎನ್.ಐ.ಸಿ. ವೈಬ್‌ಸೈಟ್ ಲಿಂಕ್ https://raichur.nic.in ನಲ್ಲಿ ವೀಕ್ಷಿಸಬಹುದಾಗಿದೆ.
10. ಮಾನ್ಯ ಅಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ರೋಸ್ಟರ್ ಕಂ ಮೆರಿಟ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸುಪ್ರೀಂಕೋರ್ಟ್ /ಸರ್ಕಾರದಿಂದ/ ರಾಜ್ಯ ನಿರ್ದೇಶನಾಲಯದಿಂದ ಹೊರಡಿಸುವ (ಗೆಜೆಟ್ ಅಧಿಸೂಚನೆ) ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.
11. ಈಗಾಗಲೇ ಸರ್ಕಾರಿ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. (ಒಂದು ವರ್ಷಕ್ಕೆ 10 ಅಂಕಗಳಂತೆ ಗರಿಷ್ಠ.2 ವರ್ಷಕ್ಕೆ 20 ಅಂಕಗಳು ಕೃಪಾಂಕ ನೀಡಲಾಗುವುದು, ಹುದ್ದೆಗಳಿಗೆ ಅನುಗುಣವಾಗಿ ಕಡ್ಡಾಯವಾಗಿ ಆದೇಶ ಪ್ರತಿ ಹಾಗೂ ಸೇವಾ ಅನುಭವ ಪ್ರಮಾಣ ಪತ್ರ ಸಲ್ಲಿಸುವುದು)
12. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. (ಆದೇಶ ಪ್ರತಿ ಹಾಗೂ ಅನುಭವ ಪ್ರಮಾಣ ಪತ್ರ ಸಲ್ಲಿಸುವುದು).
13. ಕಲ್ಯಾಣ ಕರ್ನಾಟಕ ಮೀಸಲಾತಿಯಲ್ಲಿ ಅರ್ಜಿ ಸಲ್ಲಿಸಲು ಇಚ್ಛಿಸುವವರು ಕಡ್ಡಾಯವಾಗಿ ಅನುಚ್ಛೇದ 371 (ಜೆ) ಉಪ ನಿಯಮ 3 (3) ನೇ ನಿಯಮಾನುಸಾರ ಉದ್ಯೋಗಕ್ಕಾಗಿ ಅರ್ಹತಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
14. ಸ್ಥಳೀಯ ಭಾಷೆ ಕನ್ನಡ ಆಗಿರುವುದರಿಂದ ಅಭ್ಯರ್ಥಿಗಳು ಕಡ್ಡಯವಾಗಿ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು.
15. ಹುದ್ದೆಗಳಿಗೆ ಅನುಗುಣವಾಗಿ ಸಂಬಂಧಿಸಿದ ದಾಖಲೆಗಳನ್ನು ಮಾತ್ರ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. (ದಾಖಲೆಗಲು ಕಡ್ಡಾಯವಾಗಿ ಸ್ಪಷ್ಟತೆಯಿಂದ ನೋಡಿದರೆ ಕಾಣುವ/ವೀಕ್ಷಿಸುವಂತಿರಬೇಕು).
16. ಹೆಚ್ಚಿನ ಮಾಹಿತಿಗಾಗಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಲಯ ರಾಯಚೂರು ಕಛೇರಿ ಅವಧಿಯಲ್ಲಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ : 9449843121, 9844193931)

ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ),
ರಾಯಚೂರು.